# ಜನಸಂಖ್ಯಾ ದಿನ; ಹೊಸ ಸಮೀಕರಣ

ಪ್ರಿಯವಾಗುವ ಅನೇಕ ಲಾಭಕರ ಸ್ಕೀಮ್ ಅನೌನ್ಸ್ ಮಾಡಿದೆ. ತೆರಿಗೆ ವಿನಾಯಿತಿ, ಮನೆ ಕಟ್ಟಲು, ನಿವೇಶನ ಕೊಳ್ಳಲು ಬಡ್ಡಿ ರಹಿತ ಸಾಲ, ಹೆಚ್ಚು ಮಕ್ಕಳ ಹಡೆದರೆ ಉಚಿತ ಫ್ಲಾಟ್, ದಂಪತಿಗಳು ಲೈಂಗಿಕ ಕ್ರಿಯೆ ನಡೆಸಲು ವಿಶೇಷ ರಜೆ, ಹುಟ್ಟಿದ ಮಕ್ಕಳಿಗೆ, ಬಾಣಂತಿಯರಿಗೆ ಅತ್ಯುತ್ತಮ ವೈದ್ಯಕೀಯ ಸೇವೆ ಹೀಗೆ ಹತ್ತು ಹಲವು ಆಮಿಷ ಒಡ್ಡುತ್ತಿದೆ. ಚೀನಾ ಕೂಡಾ ಇಂಥದೇ ಕೆಲವು ಪ್ರಯತ್ನ ಮಾಡುತ್ತಿದೆ. ಆದರೆ, ಯಾವ ದೇಶದಲ್ಲೂ ನಿರೀಕ್ಷಿತ ಪರಿಣಾಮ ಕಂಡುಬಂದಿಲ್ಲ. ಫಲವತ್ತತೆಯ ದರ ಸೊನ್ನೆಗೆ ತಲುಪಿ, ದೇಶವೇ ಖಾಲಿಯಾಗಿ ಬಿಡಬಹುದೆಂಬ ಆತಂಕ ಹಲವು ಚಿಕ್ಕ ದೇಶಗಳದ್ದು.

ಹಂಗೇರಿ ಉಚಿತ 'ಐವಿಎಫ್' ಚಿಕಿತ್ಸೆಯನ್ನೂ ನೀಡುತ್ತಿದೆ. 'ಉತ್ತಮ ದೇಶ, ರಾಜ್ಯ ಎಂದರೆ ಅಲ್ಲಿ ಭವಿಷ್ಯದ ಕುರಿತು ಆತಂಕವಿರಬಾರದು ಮತ್ತು ಜನಸಂಖ್ಯೆ ಏರುತ್ತಲೇ ಇರಬೇಕು' ಎಂದಿರುವ ಹಂಗೇರಿಯ ಪ್ರಧಾನಿ ವಿಕ್ಟರ್ ಒರ್ಬನ್ ವಲಸೆ ಮೂಲಕ ನಮ್ಮ ಸಂಖ್ಯೆ ಏರಬಾರದು, ನಮ್ಮಲ್ಲಿ ಬರುವವರು ಬೇರೊಂದು ದೇಶವನ್ನು ಖಾಲಿ ಮಾಡಿರುತ್ತಾರೆ ಅದು ಒಳ್ಳೆಯದಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ.

### ಎದ್ದಿದೆ ತಕರಾರು

ಮಹಿಳೆಯರಿಗೆ ನೀಡಲಾಗುತ್ತಿರುವ ರಿಯಾಯಿತಿ, ಪ್ರಾಮುಖ್ಯತೆ ಮತ್ತು ವಿಪರೀತ ಸೌಲಭ್ಯಗಳು ಅವರನ್ನು 'ಮಕ್ಕಳನ್ನು ಹೆರುವ ಯಂತ್ರ'ಗಳನ್ನಾಗಿಸುತ್ತವೆ ಮತ್ತು ಅಂಥದೊಂದು ಧೋರಣೆ ಸರ್ಕಾರದಿಂದಲೇ ವ್ಯಕ್ತವಾಗುತ್ತಿರುವುದು ತೀರಾ ಅಪಾಯಕರ ಎಂದು ವಾದಿಸಿರುವ ಮಾನವ ಹಕ್ಕುಗಳ ಸಂರಕ್ಷಣಾ ಹೋರಾಟಗಾರರು, ಅಮ್ಮನಿಗೆ ಸಿಗುವ ಮರ್ಯಾದೆಯನ್ನು ಗಮನಿಸುವ ಮಕ್ಕಳಲ್ಲಿ ಅಪ್ಪಂದಿರ ಬಗ್ಗೆ ತಾತ್ಸಾರ ಮೂಡುವ ಅಪಾಯವಿದೆ ಮತ್ತು ಕುಟುಂಬದ ಬಂಧವೇ ಹಾಳಾಗಬಹುದು ಎಂದಿದ್ದಾರೆ. ಗರ್ಭಪಾತ ನಿಷೇಧ ಅನಾರೋಗ್ಯಕರ ಅಥವಾ ನ್ಯೂನತೆ ಹೊಂದಿರುವ ಶಿಶುಗಳ ಜನನಕ್ಕೆ ಕಾರಣವಾಗಬಹುದು ಎಂಬ ಆತಂಕ ಅವರದು. ಮೆಡಿಕಲ್ ಶಾಪ್ ಮತ್ತು ಮಾಲ್‌ಗಳಲ್ಲಿ ಕಾಂಡೋಮ್ ಸಿಗದಂತೆ ನೋಡಿಕೊಂಡಿರುವ ಸರ್ಕಾರದ ಕ್ರಮಗಳನ್ನು ಟೀಕಿಸಿರುವ ತಜ್ಞ ವೈದ್ಯರು, ಲೈಂಗಿಕ ರೋಗಗಳು ಹಬ್ಬುವ ಸಾಧ್ಯತೆ ಹೆಚ್ಚುತ್ತದೆ ಎಂದು ಆತಂಕಗೊಂಡಿದ್ದಾರೆ.

**2021ರಲ್ಲಿ ವಿವಿಧ ದೇಶಗಳ ಟಿಎಫ್‌ಆರ್**

| ದೇಶ | ಟಿಎಫ್‌ಆರ್ |
|---|---|
| ನೈಗರ್ | 6.94 |
| ನೈಜೀರಿಯ | 5.6 |
| ರಷ್ಯಾ | 1.82 |
| ಬಲ್ಗೇರಿಯ | 1.8 |
| ಬ್ರೆಜಿಲ್ | 1.8 |
| ಆಸ್ಟ್ರೇಲಿಯಾ | 1.8 |
| ಯುಎಸ್‌ಎ | 1.71 |
| ಚೀನಾ | 1.6 |
| ಹಂಗೇರಿ | 1.39 |
| ಇಟಲಿ | 1.36 |
| ಜಪಾನ್ | 1.36 |
| ಗ್ರೀಸ್ | 1.3 |
| ಪೋಲೆಂಡ್ | 1.29 |
| ದ. ಕೊರಿಯ | 1.08 |
| ತೈವಾನ್ | 1.06 |

### ಜನಸಂಖ್ಯೆ ಸುತ್ತ ರಾಜಕೀಯದ ಹುತ್ತ

ಕೆಲವು ದೇಶಗಳಿಗೆ ಮಕ್ಕಳು ಬೇಕು, ಕೆಲವರಿಗೆ ಬೇಡ, ಆದರೆ ಇವರೆಲ್ಲರನ್ನು ಸಲಹುತ್ತಿರುವ ಭೂಮಿ ಒಂದೇ. ಸಂಖ್ಯೆ ಹೆಚ್ಚಾದಷ್ಟೂ ಇರುವವರಿಗೇ ಸೌಲಭ್ಯ ಇಲ್ಲದಂತಾಗಿ ಹೊಸ ಸಮಸ್ಯೆಗಳಾಗುತ್ತವೆ ಎಂಬ ಅಭಿಪ್ರಾಯ ಬಲವಾಗಿದೆ. ಹೆಚ್ಚಿನ ಜನರಿಂದ ಭೂಮಿಯ ಪರಿಸರದ ಮೇಲೆ ಜಾಸ್ತಿ ಒತ್ತಡ ಬೀಳುತ್ತದೆ, ಸಂಪನ್ಮೂಲಗಳು ವೇಗವಾಗಿ ಬರಿದಾಗುತ್ತವೆ, ಕುಡಿಯುವ ನೀರಿಗೂ ಉಸಿರಾಡುವ ಗಾಳಿಗೂ ತತ್ವಾರವಾಗುತ್ತದೆ. ನೂರು ವರ್ಷಗಳ ಹಿಂದೆ ಭೂಮಿಯ ಮೇಲೆ ಕೇವಲ 100 ಕೋಟಿ ಜನರಿದ್ದರು. ನಂತರದ ನೂರು ವರ್ಷಗಳಲ್ಲಿ ಜನಸಂಖ್ಯೆ ಏರಿ ಏರಿ 200, 300, 400 ಕೋಟಿ ದಾಟಿ ಈಗ 700 ಕೋಟಿ ದಾಟಿ ಮುನ್ನುಗ್ಗುತ್ತಲೇ ಇದೆ. ಗಾಂಧೀಜಿಯ ಪ್ರಕಾರ, 'ಭೂಮಿಗೆ ನಮ್ಮೆಲ್ಲರ ಅಗತ್ಯಗಳನ್ನು ಪೂರೈಸುವಷ್ಟು ಶಕ್ತಿ ಇದೆ. ಆದರೆ ಐಷಾರಾಮವನ್ನಲ್ಲ'. ಚೀನಾದ ಕ್ರಾಂತಿ ನಾಯಕ ಮಾವೋ, 'ಹೆಚ್ಚು ಜನರಿದ್ದರೆ ಅದು ಸಮಸ್ಯೆಯೇ ಅಲ್ಲ, ಅವರೆಲ್ಲ ಇಟ್ಟಿಗೆಗಳಿದ್ದಂತೆ, ಅದನ್ನು ಸರಿಯಾಗಿ ಜೋಡಿಸುವ ಕಲೆಗಾರನಿಗೆ ಮಾತ್ರ ಅದರ ಮಹತ್ವ ಗೊತ್ತಿರುತ್ತದೆ' ಎಂದು ಹೇಳಿ, ತಾನಿದ್ದಷ್ಟೂ ದಿನ ಜನರನ್ನು ಬಳಸಿಕೊಂಡು ಸಶಕ್ತ ಚೀನಾ ನಿರ್ಮಿಸಿ ಒಳ್ಳೆಯ ಉದಾಹರಣೆ ನೀಡಿದ್ದ.

ಅಭಿವೃದ್ಧಿ ಯೋಜನೆಗಳನ್ನು ಸರಿಯಾಗಿ ನಿಭಾಯಿಸದ ದೇಶಗಳ ನಾಯಕರಿಗೆ 'ಜನಸಂಖ್ಯೆ' ವರವಾಗಿ ಪರಿಣಮಿಸಿದೆ. ಯೋಜನೆಗಳ ಫಲ ಜನರಿಗೆ ತಲುಪಿಲ್ಲ. ಸೌಲಭ್ಯದ ಗುಣಮಟ್ಟ ಸರಿಯಿಲ್ಲ, ಸವಲತ್ತುಗಳು ಸಿಕ್ಕೇ ಇಲ್ಲ ಎನ್ನುವವರಿಗೆ ಸರ್ಕಾರಗಳು ಕೊಡುವ ಒಂದೇ ಉತ್ತರ: 'ಬೇಡಿಕೆ ಹೆಚ್ಚಿದೆ, ಪೂರೈಕೆ ಮಾಡಲು ಕೊರತೆ ಇದೆ. ಮುಂದಿನ ಯೋಜನೆಯಲ್ಲಿ ಗ್ಯಾರಂಟಿ ಸಿಗುತ್ತದೆ' ಎಂಬುದು. ನಮ್ಮವರಂತೂ 'ಎಷ್ಟೇ ಹೇಳಿದರೂ ನಮ್ಮ ಜನ ಕುಟುಂಬ ನಿಯಂತ್ರಣಕ್ಕೆ ಬೆಲೆ ಕೊಡುತ್ತಿಲ್ಲ, ಹಾಗಾಗಿ ಜನಸಂಖ್ಯೆ ಯದ್ವಾತದ್ವಾ ಏರಿಕೆಯಾಗಿ, ನಮ್ಮಲ್ಲಿರುವ ಸಂಪನ್ಮೂಲಗಳು ಸಾಕಾಗುತ್ತಿಲ್ಲ, ಅದಕ್ಕಾಗಿ ಹೊರಗಿನಿಂದ ಸಾಲ ತರಬೇಕು, ಪೂರೈಕೆ, ಉತ್ಪಾದನೆಗೆ ಸಮಯ ಬೇಕು' ಎಂಬ ಸಬೂಬು ಹೇಳುತ್ತಾರೆ. ಈಗ ಕೋವಿಡ್ ಲಸಿಕೆಯ ವಿಚಾರವೂ ಅಷ್ಟೇ, 'ಎಳೆಯ ಮಕ್ಕಳನ್ನು ಹೊರತುಪಡಿಸಿ ಉಳಿದ ಜನರಿಗೆ ನಿಂತ ಕಾಲ ಮೇಲೆ ಲಸಿಕೆ ನೀಡಲು ಸಾಧ್ಯವಿಲ್ಲ, ಆದರೂ ಪೂರೈಸಲು ಪ್ರಯತ್ನಿಸುತ್ತಿದ್ದೇವೆ' ಎನ್ನುತ್ತಾರೆ.

ಆಸ್ಟ್ರೇಲಿಯಾದ ಪ್ರಧಾನಿ ಜುಲಿಯ ಗಿಲ್ಲಾರ್ಡ್ ಕಳೆದ ಚುನಾವಣೆಯಲ್ಲಿ ಜಗತ್ತನ್ನೇ ಕಾಡುತ್ತಿರುವ ಹವಾಮಾನ ವೈಪರೀತ್ಯದ ಕುರಿತಾದ ನೀತಿಯ ಬದಲು, ಜನಸಂಖ್ಯೆಯ ಸಮಸ್ಯೆಯನ್ನೇ



ವೇಗ ಮತ್ತು ಸಾವಧಾನ!
ಜಪಾನ್‌ನ ಟೋಕಿಯೊದಲ್ಲಿ ರೈಲಿನ ನಿರೀಕ್ಷೆಯಲ್ಲಿರುವ ಓರ್ವ ವೃದ್ಧೆ